ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5046/2015

ಪ್ರಾ ಸಾ3 ಚಾಸಾ11

ಹೆಸರುಃ ಮಹೇಶ

ತಂದೆಯ ಹೆಸರುಃ ಸಣ್ಣೇಗೌಡ

ವಯಸ್ಸುಃ 42 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಬನ್ನಹಳ್ಳಿ

ಸಾಕ್ಷಿಯನ್ನು ದಿಃ24.08.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**ಕಲಂ 299 ಸಿ ಆರ್ ಪಿ ಸಿ ರನ್ವಯ ಸಾಕ್ಷಿಯ ಹೇಳಿಕೆ**

1. ಈಗ ನೋಡಿದ ನಿಪಿ 5 ಪಂಚನಾಮೆಯಲ್ಲಿರುವ ನಿಪಿ5ಬಿ ರುಜು ನನ್ನದು.

2. ಸದರಿ ರುಜುವನ್ನು ನಾನು ಸುಮಾರು 4-5 ವರುಷದ ಹಿಂದೆ ಅರಕೆರೆ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಆ ಮಹಜರಿನಲ್ಲಿ ಏನು ಬರೆದಿದ್ದಾರೆ ಎನ್ನುವುದು ಗೊತ್ತಿಲ್ಲ. ಆದರೆ ಪೊಲೀಸರು ತಿಳಿಸಿದ್ದಕ್ಕಾಗಿ ರುಜು ಮಾಡಿದ್ದೇನೆ. ನಾನು ರುಜು ಮಾಡಿದಾಗ 1 ನೇ

ಆರೋಪಿ - ಕುಮಾರ ಅಲ್ಲಿ ಇರಲಿಲ್ಲ.

3. ನನ್ನ ಸಮಕ್ಷಮದಲ್ಲಿ ಪೊಲೀಸರು ಬೈಕ ಅಥವಾ ಬೇರೆ ವಸ್ತುಗಳನ್ನು ವಶಕ್ಕೆ ಪಡೆದಿಲ್ಲ.

(ಈ ಸಾಕ್ಷಿಯು ತನ್ನ ಹೇಳಿಕೆಗೆ ವಿರುದ್ದವಾದ ಸಾಕ್ಷ್ಯವನ್ನು ನುಡಿದಿರುವುದರಿಂದ ಅಭಿಯೋಜಕರ ಕೋರಿಕೆಯಂತೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ.)

**ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ**

4. ದಿಃ 13.2.13 ರಂದು ಸಂಜೆ 17.15 ಗಂಟೆಯಿಂದ 18.11 ಗಂಟೆವರೆಗೆ ಪೊಲೀಸರು ನಿಪಿ5 ಪಂಚನಾಮೆ ಮಾಡಿ ಆರೋಪಿ ಕುಮಾರನ ವಶದಿಂದ ನಿಪಿ6 ಪೊಟೋದಲ್ಲಿ ಕಂಡುಬರುವ ಕೆ ಎ 11- ಎಸ್ -5275 ರ ಬೈಕನ್ನು ಮತ್ತು 10 ಗ್ರಾಂ ತೂಕದ ಚಿನ್ನದ ಸರ ಮತ್ತು ಕೃತ್ಯಕ್ಕೆ ಉಪಯೋಗಿಸಿದ್ದ ಎನ್ನಲಾದ ರೇಸರ್ ಅನ್ನು ಅಮಾನತ್ತು ಪಡಿಸಿಕೊಂಡು ನನ್ನ ರುಜುವನ್ನು ನಿಪಿ5 ಬಿ ರಂತೆ ಪಡೆದುಕೊಂಡಿದ್ದಾರೆ ಎನ್ನುವುದು ಸರಿಯಲ್ಲ.

5. ಆರೋಪಿ ಕುಮಾರನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

3 ಸತ್ರ ಪ್ರಕರಣ ಸಂಖ್ಯೆ ಫ್ರಾ ಸಾ ಚಾ ಸಾ

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)